**ಪ್ರಾಸಾ ಃ 10**

**ಈ ದಿನ ದಿನಾಂಕಃ 20.01.2023 ರಂದು ಪ್ರಾಸಾ-10 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**_<u>ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ</u>**

9. ಸದರಿ ಸಾಕ್ಷಿದಾರರು ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರಡಿ ನೀಡಿದ ಹೇಳಿಕೆಯು ಸೀಲ್ಡ್ ಕವರನಲ್ಲಿ ಇರುವುದರಿಂದ ಸದರಿ ಹೇಳಿಕೆಯನ್ನು ನಿಶಾನೆಯಾಗಿ ಗುರುತಿಸಲು ನ್ಯಾಯಾಲಯದ ಅನುಮತಿ ಕೋರಿದ್ದು ನೀಡಲಾಯಿತು. ಸದರಿ ಮೊಹರು ಇರುವ ಲಕೋಟೆಯನ್ನು ತೆರೆದು ಅದರಲ್ಲಿರುವ ಸಾಕ್ಷಿದಾರರ ಕಲಂ 164 ರ ಹೇಳಿಕೆಯನ್ನು ಸಾಕ್ಷಿದಾರರಿಗೆ ನೋಡಿ ಗುರುತಿಸಲು ತೋರಿಸಲಾಯಿತು. ಸದರಿ ಸಾಕ್ಷಿದಾರರು ತನ್ನ ಹೇಳಿಕೆಯನ್ನು ನೋಡಿ ಗುರುತಿಸಿರುತ್ತಾರೆ.

10. ದಿನಾಂಕಃ 11.01.2019 ರಂದು ನಾನು ಮಾನ್ಯ ದಂಡಾಧಿಕಾರಿಗಳ ಸಮಕ್ಷಮದಲ್ಲಿ ಸದರಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-30 ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯಲ್ಲಿನ ಪ್ರತಿ ಪುಟದಲ್ಲಿನ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಿಗೆ ನಿಪಿ-30 (ಎ) ಎಂದು ಗುರುತಿಸಲಾಯಿತು. ಸದರಿ ಆರೋಪಿಯು ದಾಸನ ತಲೆಗೆ ಮಚ್ಚಿನಿಂದ ಹೊಡೆದಿರುತ್ತಾನೆಂದು ನಾನು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಅದೇ ರೀತಿ ಆರೋಪಿಯು ಮಚ್ಚಿನಿಂದ ನನ್ನ ತಲೆಗೆ, ಎಡಕೈಗೆ ಹೊಡೆದಿರುತ್ತಾನೆ. ಸದರಿ ವಿಷಯವನ್ನೂ ಸಹ ದಂಡಾಧಿಕಾರಿಗಳಿಗೆ ಹೇಳಿಕೆ ನೀಡುವಾಗ ತಿಳಿಸಿರುತ್ತೇನೆ.

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ ಟಿ.ಜಿ.ವಿ. ವಕೀಲರಿಂದಃ**

ಆರೋಪಿತರ ಪರ ವಕೀಲರು ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ